1. ಈ ಜಿಲ್ಲೆಯಲ್ಲಿ 2 ಸಂಚಾರಿ ದಳಗಳು ಇದ್ದು 1 ಸಂಚಾರಿ ದಳ ಮಡಿಕೇರಿ ನಗರದಲ್ಲಿ ಇದ್ದು,ಇದು ಮಡಿಕೇರಿ ಮತ್ತು ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಶ್ರೀಗಂಧ ಮತ್ತು ಇತರೆ ಅರಣ್ಯ ಉತ್ಪಾದನೆಗಳ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಕೆಲಸ ಮಾಡುತ್ತಾ ಇದೆ. ಇನ್ನೊಂದು ಸಂಚಾರಿ ದಳ ಹುಣಸೂರಿನಲ್ಲಿದ್ದು ಇದು ಮಡಿಕೇರಿ ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ ಶ್ರೀಗಂಧ ಮತ್ತು ಇತರೆ ಅರಣ್ಯ ಸಂಪತ್ತುಗಳ ಕಳ್ಳ ಸಾಗಾಣಿಕೆ ಆಗದಂತೆ ನೋಡಿಕೊಳ್ಳುತ್ತಲಿದೆ. ಈ ಸಂಚಾರಿ ದಳಗಳಿಗೆ ವಾಹನ ವೈರ್‌ಲೆಸ್ ಉಪಕರಣ ಮತ್ತು ಬಂದೂಕುಗಳನ್ನು ಒದಗಿಸಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಅನುಕೂಲವಾಗಿದೆ.

2. ಜಿಲ್ಲೆಯಲ್ಲಿ ಒಟ್ಟು 9 ಅರಣ್ಯ ತನಿಖಾ ಕೇಂದ್ರಗಳನ್ನು ನಿರ್ಮಿಸಿದ್ದು ಈ ತನಿಖಾ ಕೇಂದ್ರಗಳು ಮಾಕುಟ್, ಕರಿಕೆ ಕುಟ್ಟಿ ಭಾಗಮಂಡಲ, ಕುಶಾಲನಗರ, ನಿಲುವಾಗಿಲು, ಸಿರಂಗಾಲ, ಆನೇಚೌಕೂರು ಮತ್ತು ಮಾಲ್ದಾರಿ ಪ್ರದೇಶಗಳಲ್ಲಿ ಕೆಲಸ ಮಾಡುತ್ತಲಿವೆ. ಈ ತನಿಖಾ ಕೇಂದ್ರಗಳ ಮುಖಾಂತರ ಯಾವ ಅರಣ್ಯ ಉತ್ಪನ್ನವನ್ನು ಸಾಗಾಣಿಕೆ ಮಾಡಬೇಕಾದರೂ ಸೂಕ್ತ ಪರವಾನಿಗೆ ಇಲ್ಲದೆ ಸಾಗಾಣಿಕೆ ಮಾಡಲು ಸಾಧ್ಯವಿಲ್ಲ.

3. ಶ್ರೀಗಂಧ ಇತರೆ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆ ತಡೆಗಟ್ಟಲು ಮತ್ತು ಆತ್ಮ ರಕ್ಷಣೆಗೋಸ್ಕರ 47 ಡಿಬಿಬಿಎಲ್ ಬಂದೂಕುಗಳು, 5ಎಸ್‌ಬಿಬಿಎಲ್ ಬಂದೂಕುಗಳು ಮತ್ತು 13 ರೈಫಲ್‌ಗಳನ್ನು ಕೊಡಗು ಜಿಲ್ಲೆಯಲ್ಲಿ ಸಿಬ್ಬಂದಿ ವರ್ಗದವರಿಗೆ ಒದಗಿಸಲಾಗಿದೆ.

4. ಅರಣ್ಯ ಸಂಪತ್ತುಗಳ ಕಳ್ಳ ಸಾಗಾಣಿಕೆಯು ಇಲಾಖೆಯ ಗಮನಕ್ಕೆ ತರುವ ಸಾರ್ವಜನಿಕರಿಗೆ ಗೌಪ್ಯ ಸೇವನಿಧಿಯಿಂದ ಧನ ಸಹಾಯ ಮಾಡಲಾಗುತ್ತಿದೆ.

5. ಅರಣ್ಯ ಉತ್ಪಾದನೆಗಳ ಕಳ್ಳ ಸಾಗಾಣಿಕೆಯನ್ನು ಹಿಡಿದು ಪ್ರಕರಣಗಳ ದಾಖಲೆ ಮಾಡಲು ಸಹಕರಿಸಿದ ಸಾರ್ವಜನಿಕರಿಗೆ ಮತ್ತು ಸಿಬ್ಬಂದಿಗಳಿಗೆ ಮಾಲಿನ ಮೌಲ್ಯದ ಶೇ. 15ರಷ್ಟು ಆದರೆ ಪ್ರತಿ ಪ್ರಕರಣದಲ್ಲೂ ರೂಪಾಯಿ 10,000ಕ್ಕೆ ಮೀರದಂತೆ ಬಹುಮಾನ ಕೊಡಲಾಗುತ್ತಿದೆ.

6. ಕಳ್ಳ ಸಾಗಾಣಿಕೆ ಪ್ರಕರಣಗಳನ್ನು ಪತ್ತೆ ಮಾಡಿದ ಸಿಬ್ಬಂದಿಗಳಿಗೆ ಪ್ರೋತ್ಸಾಹ ಧನವನ್ನು ನೀಡುವುದಲ್ಲದೆ ಈ ಬಗ್ಗೆ ಧೈರ್ಯ ತೋರಿಸಿದವರಿಗೆ ಪಾರಿತೋಷಕವನ್ನು ನೀಡಲಾಗುತ್ತಿದೆ. ಹೀಗೆ ಪಾರಿತೋಷಕ ತೆಗೆದುಕೊಂಡ ಸಿಬ್ಬಂದಿಗಳಲ್ಲಿ ಸೋಮವಾರಪೇಟೆ ವಲಯದಲ್ಲಿ ಕೆಲಸ ಮಾಡಿದ ಸಿಬ್ಬಂದಿಗಳು ಸೇರಿರುತ್ತಾರೆ.

7. ಅರಣ್ಯ ಉತ್ಪಾದನೆಗಳ ಕಳ್ಳ ಸಾಗಾಣಿಕೆಯಲ್ಲಿ ಸಿಲುಕಿದ ವಾಹನಗಳು ಕೂಡ ಹೆಚ್ಚಿನ ಪ್ರಮಾಣದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಮಾಡಿಕೊಳ್ಳಲಾಗುತ್ತಿದೆ.

ಈ ಮೇಲಿನ ಉಪಯುಕ್ತ ಕಾರ್ಯಕ್ರಮಗಳಿಂದ ಕೊಡಗು ಜಿಲ್ಲೆಯಲ್ಲಿ ಶ್ರೀಗಂಧ ಮತ್ತು ಇತರೆ ಅರಣ್ಯ ಸಂಪತ್ತುಗಳ ಕಳ್ಳ ಸಾಗಾಣಿಕೆಯನ್ನು ಯಶಸ್ವಿಯಾಗಿ ತಡೆಗಟ್ಟಲಾಗುತ್ತಿದೆ. ಜೊತೆಗೆ ದಕ್ಷಿಣ ಭಾರತಾದ್ಯಂತ ಶ್ರೀಗಂಧ ಸಾಗಾಣಿಕೆಯ ಬಗ್ಗೆ ಒಂದೇ ರೀತಿಯ ಕಾಯ್ದೆ ಮತ್ತು ಕಾನೂನನ್ನು ನಿರ್ಮಿಸಲು ಭಾರತೀಯ ಅರಣ್ಯ ಕಾಯ್ದೆ 1927ಕ್ಕೆ ಸೂಕ್ತ ತಿದ್ದುಪಡಿ ಮಾಡಲು ಪ್ರಸ್ತಾವನೆಯನ್ನು ಕೂಡ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

ಕೊಡಗು ಜಿಲ್ಲೆಯ ಗಿರಿಜನರ ಸಂಖ್ಯೆ

2244 - ಶ್ರೀಮತಿ ಸುಮಾ ವಸಂತ (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕೊಡಗು ಜಿಲ್ಲೆಯಲ್ಲಿರುವ ಗಿರಿಜನರ ಸಂಖ್ಯೆ ಎಷ್ಟು ?(ತಾಲ್ಲೂಕುವಾರು ವಿವರ ಒದಗಿಸುವುದು)
2. ಇವರ ಪೈಕಿ ಸ್ವಂತ ಮನೆ ಮತ್ತು ಆಸ್ತಿ ಹೊಂದಿರುವವರ ಸಂಖ್ಯೆ ಎಷ್ಟು ?
3. ಇವರ ಪೈಕಿ ಕಂದಾಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆ ಎಷ್ಟು ? ಮತ್ತು ಅರಣ್ಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆ ಎಷ್ಟು ?
4. ಅರಣ್ಯದ ಕೆಲಸ ಮಾಡಿಸುತ್ತಿರುವುದು ನಿಜವೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) :

ಅ)

ಕೊಡಗು ಜಿಲ್ಲೆಯ ಗಿರಿಜನರ ಸಂಖ್ಯೆ	36877
1. ಮಡಿಕೇರಿ ತಾಲ್ಲೂಕು	4635
2. ಸೋಮವಾರಪೇಟೆ ತಾಲ್ಲೂಕು	5062
3. ವಿರಾಜಪೇಟೆ ತಾಲ್ಲೂಕು	27180

ಆ)

1. ಸ್ವಂತ ಮನೆಯನ್ನು ಹೊಂದಿರುವವರ ಸಂಖ್ಯೆ	5484
2. ಸ್ವಂತ ಆಸ್ತಿಯನ್ನು ಹೊಂದಿರುವವರ ಸಂಖ್ಯೆ	1054

ಇ)

1) ಕಂದಾಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆ	837
2) ಅರಣ್ಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆ	217

ಈ) -ಹೌದು-

ಚಿಕ್ಕಮಗಳೂರು ಅರಣ್ಯ ಇಲಾಖೆಯಲ್ಲಿ ಇತ್ಯರ್ಥವಾಗದಿರುವ ದರಖಾಸ್ತು ಅರ್ಜಿಗಳ ಸಂಖ್ಯೆ

2247 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯ ಅರಣ್ಯ ಇಲಾಖೆಯಲ್ಲಿ ಇತ್ಯರ್ಥವಾಗದೆ ಇರುವ ದರಖಾಸ್ತು ಅರ್ಜಿಗಳೆಷ್ಟು ?

ಆ) ಯಾವ ಯಾವ ವರ್ಗದ ಜನರಿಂದ ದರಖಾಸ್ತು ರೆಕಾರ್ಡ್‌ಗಳ ಸಂಖ್ಯೆ ಎಷ್ಟು ? ಯಾವ ವರ್ಷದವುಗಳಾಗಿರುತ್ತವೆ ?

ಇ) ಬಡವರ ದರಖಾಸ್ತು ರೆಕಾರ್ಡುಗಳನ್ನು ಮಾತ್ರ ಅರಣ್ಯ ಇಲಾಖೆಯಲ್ಲಿ ಇತ್ಯರ್ಥವಾಗದೆ ಇರಲು ಕಾರಣವೇನು ?

ಶ್ರೀ ಇ.ಟಿ. ಶಂಬುನಾಥ್ (ರಾಜ್ಯ ಅರಣ್ಯ ಸಚಿವರು) :